ಕರ್ನಾಟಕ ಸರ್ಕಾರ

# ಮೀನುಗಾರಿಕೆ ಇಲಾಖೆ

ಮೀನುಗಾರಿಕೆ ನಿರ್ದೇಶನಾಲಯ, 3ನೇ ಮಹಡಿ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಕೇಂದ್ರ, ಡಾ|| ಅಂಬೇಡ್ಕರ್ ವೀದಿ, ಬೆಂಗಳೂರು-560 001. ದೂ. : 080-22864635

ಸಂಖ್ಯೆ : ಎನ್.ಎಫ್.ಡಿ.ಬಿ / 02 / 2011-12 ದಿನಾಂಕ : 20.06.2011

## ಪ್ರಕಟಣೆ

**ವಿಷಯ: ರಾಷ್ಟ್ರೀಯ ಮೀನುಗಾರಿಕೆ ಅಭಿವೃದ್ಧಿ ಮಂಡಳಿಯ ನೆರವಿನಡಿ 2011-12 ನೇ ಸಾಲಿನಲ್ಲಿ ಅಭಿವೃದ್ಧಿಪಡಿಸಲಾಗುವ ಜಲಾಶಯಗಳಿಗೆ ಖಾಸಗಿಯವರಿಂದ ಮೀನುಮರಿಗಳನ್ನು ಖರೀದಿಸುವ ಬಗ್ಗೆ.**

2011-12ನೇ ಸಾಲಿನಲ್ಲಿ ರಾಷ್ಟ್ರೀಯ ಮೀನುಗಾರಿಕೆ ಅಭಿವೃದ್ಧಿ ಮಂಡಳಿಯ ಅನುದಾನಿತ ಜಲಾಶಯ ಅಭಿವೃದ್ಧಿ ಯೋಜನೆಯಡಿ ರಾಜ್ಯದ ಜಲಾಶಯ / ಕೆರೆಗಳಿಗೆ ಸುಮಾರು 6 ರಿಂದ 7 ಕೋಟಿ ಸಂಖ್ಯೆಯ 80-100 ಮೀ.ಮೀ. ಗಾತ್ರದ ಅಡ್ವಾನ್ಸ್ಡ್ ಫಿಂಗರ್‌ಲಿಂಗ್ಸ್ (ಬಲಿತ ಬಿತ್ತನೆ ಮರಿಗಳು) ಮೀನುಮರಿಗಳನ್ನು ಒಂದು ಮರಿಗೆ ಸಾಗಾಣಿಕೆ ವೆಚ್ಚ ಸೇರಿ ರೂ 1.00 ರಂತೆ ಖರೀದಿಸಿ ಬಿತ್ತನೆ ಮಾಡುವ ಗುರಿಯನ್ನು ಇಲಾಖೆಯು ಇಟ್ಟುಕೊಂಡಿದ್ದು, ಮೀನುಮರಿಗಳನ್ನು ರಾಜ್ಯದಲ್ಲಿರುವ ಸರ್ಕಾರಿ ಮತ್ತು ಖಾಸಗಿ ವಲಯದ ಮೀನುಮರಿ ಕೇಂದ್ರಗಳಿಂದಲೇ ಖರೀದಿಸಿ ಸ್ಥಳೀಯ ಉತ್ಪಾದಕರಿಗೆ ಉತ್ತೇಜನ ನೀಡಲು ಉದ್ದೇಶಿಸಲಾಗಿದೆ. ಮೀನುಮರಿಗಳನ್ನು ಸರಬರಾಜು ಮಾಡಲು ಇಚ್ಛಿಸುವ ಕರ್ನಾಟಕ ರಾಜ್ಯದಲ್ಲಿನ ಮೀನುಮರಿ ಉತ್ಪಾದನಾ / ಪಾಲನಾ ಕೇಂದ್ರಗಳು / ಮೀನು ಸಾಕಾಣಿಕೆ ಕೊಳಗಳನ್ನು ಹೊಂದಿರುವ ಕೃಷಿಕರು ಈ ಕಛೇರಿಗೆ ನಿಗದಿತ ನಮೂನೆಯಲ್ಲಿ ಅರ್ಜಿ ಸಲ್ಲಿಸಿ ನೋಂದಾಯಿಸಿ ಕೊಳ್ಳಬಹುದೆಂದು ಈ ಮೂಲಕ ಕೋರಲಾಗಿದೆ. ಅರ್ಜಿ ನಮೂನೆಗಳನ್ನು ಇಲಾಖೆಯ ಕಛೇರಿಗಳಲ್ಲಿ ಹಾಗೂ **www.karunadu.gov.in/fisheries** ಅಂತರ್ಜಾಲ ತಾಣದಲ್ಲಿಯೂ ಸಹ ಪಡೆಯಬಹುದು. ಇಲಾಖೆಯ ಮೀನುಮರಿ ಉತ್ಪಾದನೆ ಕೇಂದ್ರಗಳಿಂದ ಸ್ಪಾನ್ / ಫ್ರೈ ಖರೀದಿಸಿ ಪಾಲನೆ ಕೈಗೊಂಡ ರೈತರಿಗೆ ಆದ್ಯತೆ ನೀಡಲಾಗುವುದು.

ಸಹಿ/- ಮೀನುಗಾರಿಕೆ ನಿರ್ದೇಶಕರು